ನಂ. 225. ತಾರೀಖು 19ನೇ ಸಪ್ಟಂಬರ್ 1876.

ಚಿತ್ರದುರ್ಗ ತಾಲ್ಲೂಕು ಶಿರಸ್ತೆದಾರ್ರು ಸೀನಪ್ಪನವರು, ಶಾಮಯ್ಯಂಗಾರ್ರ ಗೈರ್ ಹಾಜರೀ ಅಥವಾ ಮೆತ್ತೊಂದು ಹುಕ್ಕುಂ ಕೊಡುವ ಪರ್ಯಂತ ೨ನೇ ಗ್ರೇಡ್ ಅಮಲ್ದಾರ್ ವ ಪಾವಗಡದ ತಾಲ್ಲೂಕು 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್.

ನಂ. 226. ತಾರೀಖು 20ನೇ ಸಪ್ಟಂರ್ಬು 1876.

ಈ ಕೆಳಗೆ ನಮೂದಿಸಲ್ಪಡುವ ಜನಗಳು ಪೋಟೂಪೋಟೀಯಿಂದ ಪರೀಕ್ಷೆಮಾಡಲ್ಪಟ್ಟು ಮೈಸೂರು ಸೀಮೆಯ ಮೆಡಿಕೆಲ್ ಸಾರ್ವಿಸಿಗೆ ಲಾಯಖಿರುವಂತೆ ಕಾಣಬಂದದರಿಂದ, 1876ನೇ ಅಕ್ಟೋಬರು 1ನೇ ತಾರೀಖು ಲಗಾಯತು ಮೆಡಿಕೆಲ್ ಪ್ಯುಪಿಲ್‌ಗಳಾಗಿ ಅಂಗೀಕರಿಸಲ್ಪಟ್ಟು ನೇಮಿಸಲ್ಪಟ್ಟಿರುವದು ಹ್ಯಾಗಂದರೆ,—

ಹೆಸರು.	ವಿದ್ಯಾಭ್ಯಾಸ ಮಾಡಿದ ಸ್ಥಳ.	ಹೆಸರು.	ವಿದ್ಯಾಭ್ಯಾಸ ಮಾಡಿದ ಸ್ಥಳ.
ಎ. ವರದರಾಜುಲುನಾಯುಡು	ಮದರಾಸ್ ವ ಬೆಂಗಳೂರು,	ಮೇಲ್ ಬಿಜೆಡೆಕ್	ಇಫ್ರಯಿಂ—ಲಂಡ್ಕ ಡಿಟೋ.
ಚಿ. ಬಿ ಚಿನ್ನಸಾಮಿ	ವೆಸಿಲಿಯರ್ಕ ಮಿಷ್ಕನ್ಸ್ಕೂಲ್.	ಅಬ್ದುಲ್‌ವಾಹಬ್	30ನೇ ರಿಜಿಮೆಂಟ್ ನೇ|| ಇಡಿ|| ಸ್ಕೂಲ್.
ವೈ. ಎಸ್, ಬಾಲಸುಂದರಂಮೊದಲಿ	ಡಿಟೋ.	ಜೋಯಿಲ್ ಸಾಮ್ಯೂಯಲ್	ಲರ್ಡಕ ಮಿಷ್ಕನ್ಸ್ಕೂಲ್.
ಎಂ. ಆರ್. ಶ್ರೀನಿವಾಸುಲುನಾಯುಡು	ಡಿಟೋ.	ಏ. ರಾಜಗೋಪಾಲನಾಯಕರ್	ಸೆಂಟ್ರಲ್ ಕಾಲೆಜ್.

"ಬವೋಜೀಬ್ ಹುಕ್ಕುಂ,"

T. CLARKE,
Offg. Secretary.

ಕೊಡಗು ಜೀಪ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆ.

ನಂ. 8. ತಾರೀಖು 15ನೇ ಸಪ್ಟಂಬರ್ 1876.

ಈ ಕೆಳಗೆ ಬರುವ ಮ್ಯುನಿಸಿಪಲ್ ಬೈಲಾ ನಿಬಂಧನೆಯು ವೀರರಾಜೇಂದ್ರ ಪೇಟೆಯಲ್ಲಿ ಜಾಲ್ತೀ ಇಸವಿಯಲ್ಲಿ ಮಾತ್ರ ಜಾರೀಯಲ್ಲಿರುವ ಹಾಗೆ ಇದನ್ನು ಜೀಪ್ ಕಮ್ಮಿಷನ್ನರ್ ಸಾಹೆಬರವರು ಮಂಜೂರು ಮಾಡಿರುತ್ತಾರೆ.

ಮ್ಯುನಿಸಿಪಲ್ ಸರಹದ್ದಿನ ವಳಕ್ಕೆ ವಿಕ್ರಯಕ್ಕಾಗಿ ತರಲ್ಪಡುವ ಪ್ರತಿ ಯೆತ್ತಿಗೂ, ಆಕಳಿಗೂ, ಯಾ ಎಮ್ಮೆಕೋಣಕ್ಕೂ ಒಂದು ಆಣೆ ತೆರಿಗೆ ವಸೂಲ್ ಮಾಡಲ್ಪಡತಕ್ಕದು.

"ಬವೋಜೀಬ್ ಹುಕ್ಕುಂ."

T. CLARKE,
Offg. Secretary.